ಗೇಣಿ ವಿವಾದಗಳ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿರುವ ರಿಟ್‌ಗಳನ್ನು ಜಿಲ್ಲಾಮಟ್ಟದಲ್ಲಿಯೇ ತೀರ್ಮಾನಿಸಲು ಅಧಿಸೂಚನೆ ಸಂಖ್ಯೆ. ಆರ್‌ಡಿ ೨೮ ಎಲ್‌ಆರ್‌ಇ ೮೫ (ಪಿ) ದಿನಾಂಕ ೨೭-೧೨-೧೯೮೫ ರಂದು ಭೂ ಸುಧಾರಣಾ ಕಾನೂನಿನ ಕಲಂ ೧೧೬ ಎ ಮತ್ತು ೧೧೬ ಬಿ ಗಳಿಗೆ ಹೊಸ ಉಪ-ಪ್ರಕರಣಗಳನ್ನು ಸೇರಿಸಿ ಕಾನೂನನ್ನು ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಯಂತೆ ಜಿಲ್ಲಾ ಮಟ್ಟದಲ್ಲಿ ಭೂ ನ್ಯಾಯಾಧೀಕರಣಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಅಧಿಕಾರವಿದೆ ಮತ್ತು ಈಗಾಗಲೇ ಪ್ರತಿ ಜಿಲ್ಲೆಗೊಂದರಂತೆ ಭೂ ಸುಧಾರಣಾ ಅಪೀಲು ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆ. ಉಚ್ಚ ನ್ಯಾಯಾಲಯದಿಂದ ಸಿವಿಲ್ ನ್ಯಾಯಾಧೀಶರ ಸೇವೆ ದೊರಕಿದ ತಕ್ಷಣ ಮತ್ತು ಅವಶ್ಯ ಕಟೀರಿಗಳು ಸಿದ್ಧವಾದ ಕೂಡಲೇ ಈ ನ್ಯಾಯಾಧೀಕರಣಗಳು ಕಾರ್ಯಾರಂಭ ಮಾಡುವುವು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಆರು ತಿಂಗಳಿಂದಲೂ ಭೂ ಸುಧಾರಣೆಯ ಬಗ್ಗೆ ಹೈಕೋರ್ಟಿನಲ್ಲಿರತಕ್ಕಂಥ ಕೇಸ್‌ಗಳನ್ನು ಇತ್ಯರ್ಥಗೊಳಿಸಲು ಜಿಲ್ಲಾಮಟ್ಟದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿ ಟ್ರಾನ್ಸ್‌ಫರ್ ಮಾಡುತ್ತೇವೆಂದು ಹೇಳಿದ್ದರಿಂದ ಹೈಕೋರ್ಟಿನಲ್ಲಿರ ತಕ್ಕಂಥ ಕೇಸ್‌ಗಳು ಯಾವುದೂ ಇನ್ನುವರೆಗೂ ಇತ್ಯರ್ಥವಾಗಿಲ್ಲ. ಇದರಿಂದಾಗಿ ಜಮೀನುದಾರರು ಈ ಅವಕಾಶವನ್ನು ಉಪಯೋಗಿಸಿಕೊಂಡು ಗೇಣಿದಾರರನ್ನು ಓಡಿಸುತ್ತಿರುತ್ತಾರೆ. ಹೈಕೋರ್ಟಿಗೆ ಹೋದರೆ ನಮಗೆ ಇದು ಅನ್ವಯವಾಗುವುದಿಲ್ಲ, ಜಿಲ್ಲಾ ಕೋರ್ಟಿಗೆ ಹೋಗಿ ಎಂದು ಹೇಳುತ್ತಾರೆ. ಇಂಥ ಒಂದು ಅನಿಶ್ಚಿತತೆಯಿಂದ ಗೇಣಿದಾರರಿಗೆ ಬಹಳ ತೊಂದರೆಯಾಗಿರುತ್ತದೆ. ಆರು ತಿಂಗಳಿಂದಲೂ ಇಂಥ ಒಂದು ಪರಿಸ್ಥಿತಿ ಇರುತ್ತದೆ. ಸ್ಪಷ್ಟವಾಗಿ ಹೇಳಿ, ಯಾವಾಗ ಈ ಅವ್ಯವಸ್ಥೆಯನ್ನು ಸರಿ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.— ಆದಷ್ಟು ಬೇಗ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಬೇಗ ಎಂದರೆ ಯಾವಾಗ. ಸ್ಪಷ್ಟವಾಗಿ ಹೇಳಿ ? ಇನ್ನು ಒಂದು ತಿಂಗಳಲ್ಲಿಯೇ ಮಾಡುತ್ತೀರಾ, ಅಥವಾ ಇನ್ನು ಎರಡು ತಿಂಗಳಲ್ಲಿ ಮಾಡುತ್ತೀರಾ ? ಯಾವುದನ್ನೂ ಸ್ಪಷ್ಟವಾಗಿ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಹೇಳಿದಂತೆ ೧೦೦ಕ್ಕೆ ೧೦೦ರಷ್ಟು ಸರಿಯಾದಂಥ ಉತ್ತರವನ್ನು ಕೊಟ್ಟಿದ್ದೇನೆ. ಆದ್ದರಿಂದ ಹೈಕೋರ್ಟ್‌ನವರನ್ನು ಕೇಳಿ ಅವರ ಸಹಾಯದೊಂದಿಗೆ ಆದಷ್ಟು ಬೇಗ ವ್ಯವಸ್ಥೆಯನ್ನು ಮಾಡುತ್ತೇನೆ.

(೩) ಬೆಳಗಾಂ ಮಹಾನಗರಸಭೆಯ ಕನ್ನಡ ಮತ್ತು ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನೂ ಅನರ್ಜಿತಗೊಳಿಸಲು ಬೆದರಿಕೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬಿಳಗಿ).—ಮಾನ್ಯ ಅಧ್ಯಕ್ಷರೇ ಬೆಳಗಾಂ ಮಹಾನಗರ ಸಭೆಯ ಕನ್ನಡ ಹಾಗೂ ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನು ಅನೂರ್ಜಿತಗೊಳಿಸುವುದಾಗಿ ಅಲ್ಲಿಯ ಮಹಾ ಪೌರರು ಬೆದರಿಕೆ ಹಾಕಿರುವುದರ ವಿಚಾರದ ಬಗ್ಗೆ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಳಗಾಂ ಮಹಾನಗರ ಸಭೆಯ ಕನ್ನಡ ಹಾಗೂ ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನು ಅನೂರ್ಜಿತಗೊಳಿಸುವುದಾಗಿ ಅಲ್ಲಿಯ ಮಹಾ ಪೌರರು ಬೆದರಿಕೆ ಹಾಕಿರುವುದರ ವಿಚಾರದ ಬಗ್ಗೆ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಗಮನ ಸೆಳೆಯಲಾಗುವುದು.

ಬೆಳಗಾಂ ಮಹಾ ನಗರಪಾಲಿಕೆಯ ಆಯುಕ್ತರನ್ನು ಸಂಪರ್ಕಿಸಿ ಗಮನ ಸೆಳೆಯುವ ವಿಷಯಕ್ಕೆ ಸಂಬಂಧಿಸಿದಂತೆ ನಿಜಸ್ಥಿತಿಯನ್ನು ಅರಿತುಕೊಳ್ಳಲಾಯಿತು.

ಈ ವರ್ಷದ ಜನವರಿ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರು ನಗರದಲ್ಲಿ ಒಂದು ಪ್ರದರ್ಶನ ನಡೆಯಿತು. ಬೆಳಗಾಂ ಮಹಾನಗರ ಪಾಲಿಕೆಯನ್ನು ವಿಸರ್ಜಿಸಬೇಕೆಂದು ಅವರ ಬೇಡಿಕೆಯಾಗಿತ್ತು.

ಪ್ರದರ್ಶನದಲ್ಲಿ ಉರ್ದು ಮತ್ತು ಕನ್ನಡ ಮಾತನಾಡುವ ಬೆಳಗಾಂ ಮಹಾನಗರ ಪಾಲಿಕೆಯ ಸದಸ್ಯರು ಶಾಮೀಲಾಗಿದ್ದರೂ ಎಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿತವಾದ ಸುದ್ದಿಯ ಆಧಾರದ ಮೇಲೆ ೩೧-೧-೧೯೮೬ ರಂದು ನಡೆದ ನಗರ ಪಾಲಿಕೆಯ ಸಭೆಯಲ್ಲಿ ಒಬ್ಬ ಸದಸ್ಯರು ಗವನು ಸೆಳೆಯುವ ಸೂಚನೆಯನ್ನು ಮಂಡಿಸಿದ್ದರು. ಈ ಗವನ ಸೆಳೆಯುವ ಸೂಚನೆಯ ಮೇಲೆ ಚರ್ಚೆ ನಡೆದಾಗ ಕನ್ನಡ ಹಾಗೂ ಉರ್ದು ಮಾತನಾಡುವ ಬೆಳಗಾಂ ಮಹಾನಗರ ಪಾಲಿಕೆಯ ಸದಸ್ಯರು ಪ್ರದರ್ಶನದಲ್ಲಿ ಭಾಗವಹಿಸಿದ್ದರು ಎಂಬುದರ ಬಗ್ಗೆ ಯಾವ ಪುರಾವೆಗಳನ್ನೂ ಮಂಡಿಸಿಲ್ಲವೆಂದು ಹಾಗೂ ವೃತ್ತ ಪತ್ರಿಕೆಗಳಲ್ಲಿ ಬಂದ ಸುದ್ದಿಯ ಆಧಾರದ ಮೇಲೆ ಗವನ ಸೆಳೆಯುವ ಸೂಚನೆಯನ್ನು ಚರ್ಚಿಸುವುದು ಸೂಕ್ತ ಅಲ್ಲವೆಂದು ಸದಸ್ಯರುಗಳು ಅಭಿಪ್ರಾಯಪಟ್ಟರು. ಯಾವುದೇ ನಗರ ಸಭೆಯ ಸದಸ್ಯರು ಮಹಾನಗರ ಪಾಲಿಕೆಯ ಹಿತಾಸಕ್ತಿಗೆ ವಿರುದ್ಧ ಕೆಲಸ ಮಾಡಿದಲ್ಲಿ ಅವರು ಮಹಾನಗರ ಪಾಲಿಕೆಯ ಸದಸ್ಯರಾಗಿ ಮುಂದುವರಿಯಲು ಅನರ್ಹರಾಗುತ್ತಾರೆಂದು ಅಂತಹವರು ಸದಸ್ಯತ್ವದಿಂದ ವಜಾ ಮಾಡಬಹುದೆಂದೂ ಚರ್ಚೆಯ ಕೊನೆಯಲ್ಲಿ ಮಹಾನಗರ ಪಾಲಿಕೆಯ ಮೇಯರ್‌ರವರು ತಮ್ಮ ಅಭಿಪ್ರಾಯವ್ಯಕ್ತಪಡಿಸಿದರು.

ಮೇಯರ್‌ರವರು ಮಾಡಿದರೆಂದು ಹೇಳಲಾದ ಮೇಲಿನ ಹೇಳಿಕೆ ಸಾಮಾನ್ಯ ಸ್ಥಿತಿಯದ್ದಾಗಿದ್ದು, ಅದರಲ್ಲಿ ಆಕ್ಷೇಪಾರ್ಹವಾದಂಥ ಯಾವುದೇ ಅಂಶಗಳು ಇಲ್ಲ.

ಕರ್ನಾಟಕ ಪಹಾನಗರ ಪಾಲಿಕೆಗಳ ೧೯೭೬ನೇ ಕಾಯಿದೆಯಲ್ಲಿ ಮೇಯರ್ ಅವರಿಗಾಗಲೀ ಅಥವಾ ಮಹಾನಗರ ಪಾಲಿಕೆಗಾಗಲೀ ಚುನಾಯಿತ ಸದಸ್ಯರನ್ನು ವಜಾ ಮಾಡಲು ಅಧಿಕಾರ ಇಲ್ಲ. ಮೇಲೆ ಹೇಳಿದ ಕಾಯಿದೆಯ ೨೬ನೇ ಕಲಂನಲ್ಲಿ ಅನರ್ಹತೆಗಳು ಯಾವುವೆಂಬುದನ್ನು ಹೇಳಲಾಗಿವೆ. ಚುನಾಯಿತ ಸದಸ್ಯರು ಸದಸ್ಯರಾಗಿ ಮುಂದುವರಿದಾಗ ಯಾವುದೇ ತರಹದ ಅನರ್ಹತೆಗೆ ಗುರಿ ಆದಲ್ಲಿ ಅವರ ಸದಸ್ಯತ್ವ ಕೊನೆಗೊಳ್ಳುತ್ತದೆ.

ಹಾಗೆ ಅನರ್ಹತೆಗೆ ಗುರಿಯಾದಲ್ಲಿ ಸದಸ್ಯರ ಸ್ಥಾನ ತೆರವಾಗಿದೆ ಎಂದು ಪ್ರಕಟಿಸಲು ವಿಭಾಗಾಧಿಕಾರಿಗಳಿಗೆ ಮಾತ್ರ ಅಧಿಕಾರ ಇದೆ. ವಿಭಾಗಾಧಿಕಾರಿಗಳು ಈ ತರಹ ಮಾಡಿದ ಆಜ್ಞೆಯ ವಿರುದ್ಧ ಮೇಲ್ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅವಕಾಶ ಇದೆ.

ಆದ್ದರಿಂದ ಬೆಳಗಾಂ ಮಹಾನಗರ ಪಾಲಿಕೆಯ ಯಾವುದೇ ಸದಸ್ಯರನ್ನು ಯಾವುದೇ ಕಾರಣಕ್ಕಾಗಿ ವಜಾ ಮಾಡಲು ಮೇಯರ್‌ರವರಿಗಾಗಲೀ ನಗರ ಮಹಾಪಾಲಿಕೆಗಾಗಲೀ ಕಾನೂನಿನಲ್ಲಿ ಅವಕಾಶ ಇಲ್ಲ.

ಶ್ರೀ ಬಾಬುರೆಡ್ಡಿ ತುಂಗಳ್.—ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಸಚಿವರು ನನ್ನ ಗವನ ಸೆಳೆಯುವ ಸೂಚನೆಗೆ ಸರಿಯಾದ ವಿವರಣೆಯನ್ನು ಕೊಟ್ಟಿಲ್ಲ. ಬೆಳಗಾವ್ ನಗರದಲ್ಲಿ ಕನ್ನಡ ವಿರುದ್ಧ ಚಳುವಳಿ ನಡೆಯುತ್ತಿರತಕ್ಕಂಥದ್ದು ಈಗಾಗಲೇ ಎಲ್ಲ ಪತ್ರಿಕೆಗಳಲ್ಲೂ ಬಂದಿರುತ್ತದೆ ಬೆಳಗಾಂ ಮಹಾನಗರ ಸಭೆಯು ಕನ್ನಡ ಹಾಗೂ ಉರ್ದು ಮಾತನಾಡುವ ಸದಸ್ಯರ ಸದಸ್ಯತ್ವವನ್ನು ಅನೂರ್ಜಿತಗೊಳಿಸಲಾಗುತ್ತದೆಂದೂ ಹೇಳಿರತಕ್ಕಂಥದ್ದು ಸ್ಪಷ್ಟವಾಗಿ ಪತ್ರಿಕೆಗಳಲ್ಲಿ ಬಂದಿರುತ್ತದೆ. ಆದರೆ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ನಾವು ಬೆಳಗಾಮ್ ಮಹಾನಗರ ಸಭೆಯವರನ್ನು ಮತ್ತು ಅಲ್ಲಿಯ ರೈತರನ್ನು ಸಂಪರ್ಕಿಸಿ ಉತ್ತರವನ್ನು ಪಡೆದುಕೊಂಡಿರುತ್ತೇವೆಂದು ಹೇಳಿರುತ್ತಾರೆ ಅಲ್ಲಿಯ ಮೇಯರ್‌ರವರು ಹೇಳಿದ ಉತ್ತರವನ್ನು ಕೊಟ್ಟಿರುತ್ತಾರೆ. ಅಲ್ಲಿ ಒಂದು ರೀತಿಯಾದ ಕಳವಳಕಾರಿಯಾದ ಬದಲಾವಣೆಯಾಗಿರುತ್ತದೆ. ಅಲ್ಲಿಯ ಕನ್ನಡಿಗರು ಕನ್ನಡದ ಜೊತೆಯಲ್ಲಿ ಮರಾಠಿ ಭಾಷೆಯನ್ನು ಬಳಸಿ ಬರೆದಿರುವ ಫಲಕಗಳಿಗೆ ಡಾಂಬರ್ ಹಚ್ಚತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಕಾರ್ಪೊರೇಷನ್ ಮೇಯರ್‌ರವರೇ ಘಂಟಾಘೋಷವಾಗಿ ಹೇಳಿರುತ್ತಾರೆ. ಇದರ ಬಗ್ಗೆ ಹಿಂದೆ ಇದೇ ಸದನದಲ್ಲಿ ತೀವ್ರವಾಗಿ ಚರ್ಚೆ ನಡೆದು ಒಂದು ನಿರ್ಣಯವನ್ನು ತಂದಂಥ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಂತ್ರಿತರ ಪಕ್ಷದ ಸದಸ್ಯರುಗಳು ಪಕ್ಷಾತೀತವಾಗಿ ಇದನ್ನು ವಿರೋಧಿಸಿ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ಗಂಭೀರವಾದ ವಿಷಯ. ಇದರ ಬಗ್ಗೆ ನನಗೆ ಮಾತನಾಡಲು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರೇ ಇದರ ಬಗ್ಗೆ ಮಾತನಾಡಲು ನಿಮಗೆ ಅವಕಾಶ ಇಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ನನಗೆ ಮಾತನಾಡಲು ಅವಕಾಶವನ್ನು ಕೊಡಬೇಕು. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು. ಇಲ್ಲವಾದರೆ ನಾನು ಸತ್ಯಾಗ್ರಹವನ್ನು ಮಾಡ ಬೇಕಾಗುತ್ತದೆ.

(ಈ ರೀತಿ ಹೇಳುತ್ತಾ ತಮ್ಮ ಪೀಠದಿಂದ ಎದ್ದು ಬರಲು ಪ್ರಾರಂಭಿಸುವರು)

ಅಧ್ಯಕ್ಷರು.—ದಯವಿಟ್ಟು ನೀವು ನಿಮ್ಮ ನಿಮ್ಮ ಜಾಗಕ್ಕೆ ಹೋಗಿರಿ. ಎಲ್ಲರೂ ಹೀಗೆ ಎದ್ದು ನಿಂತು ಮಾತನಾಡಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ನಾರಾಯಣಕುಮಾರ್‌ರವರೇ, ಇಲ್ಲಿ ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಬಾಬುರೆಡ್ಡಿ ಎ. ತುಂಗಳ್.—ಮಾನ್ಯ ಅಧ್ಯಕ್ಷರೇ, ಆದ್ದರಿಂದ ನಾನು ಒತ್ತಾಯ ಮಾಡುತ್ತೇನೆ ....

ಅಧ್ಯಕ್ಷರು.—ಶ್ರೀ ತುಂಗಳರವರೇ, ಇಷ್ಟೊಂದು ಉದ್ವೇಗದಿಂದ ಮಾತನಾಡಿದರೆ ಆಗುವುದಿಲ್ಲ. ನಾರಾಯಣಕುಮಾರ್‌ರವರೇ ನಾನು ನಿಮಗೆ ಕೊನೆಯ ಎಚ್ಚರಿಕೆ ಕೊಡುತ್ತಿದ್ದೇಣೆ. ಗಮನ ಸೆಳೆಯುವ ಸೂಚನೆ ಇದ್ದಾಗ ಮತ್ತೊಬ್ಬರಿಗೆ ಮಾತನಾಡಲಿಕ್ಕೆ ಅವಕಾಶ ಇಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ನಾನು ಹೇಳುವುದನ್ನು ನೀವು ಸ್ವಲ್ಪ ಕೇಳಬೇಕು. ಗಮನ ಸೆಳೆಯುವ ಸೂಚನೆ ಯಲ್ಲಿ ಬೇರೆಯವರಿಗೆ ಅವಕಾಶ ಇಲ್ಲವೆಂದು ಹೇಳಿದ್ದೇನೆ. ನೀವು ನಿಮ್ಮ ಜಾಗ ಬಿಟ್ಟು ಧರಣಿ ಕುಳಿತುಕೊಳ್ಳುವಂತೆ ಬಂದರೆ ನಾನು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿ ಬರುತ್ತದೆ. ನಿಮ್ಮನ್ನು ಹೊರಗಡೆ ಕಳಿಸಲಿಕ್ಕೆ ನನಗೆ ಅಧಿಕಾರ ಇದೆ. ಹೊರಗಡೆ ನೀವು ಹೋಗುವುದಿಲ್ಲ ಎಂದರೆ ನಿಮ್ಮನ್ನು ಸಸ್ಪೆಂಡ್ ಮಾಡಲಿಕ್ಕೂ ಕೂಡ ನನಗೆ ಅಧಿಕಾರ ಇದೆ. ಹೊರಗಡೆಗೆ ಹೋಗಬೇಕೆಂದು ಹೇಳಿದರೂ ನೀವು ಹೋಗುವುದಿಲ್ಲವಾದರೆ ನಾನು ಮಾರ್ಷಲ್ ಅವರನ್ನು ಕರೆಸಿ ನಿಮ್ಮನ್ನು ಹೊರಗೆ ಹಾಕ ಬಹುದು ಆದರೆ ನಾನು ಹಾಗೆ ಮಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ನೀವು ನಿಮ್ಮ ಜಾಗದಲ್ಲಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ನೀವು ನನ್ನನ್ನು ಹೆದರಿಸುತ್ತಿದ್ದೀರಿ. ನಾನು ಸರ್ವತ್ಯಾಗಕ್ಕೂ ಸಿದ್ಧನಾಗಿದ್ದೇನೆ. ನನ್ನ ತಾಯಿಯೂ ಕನ್ನಡ ತಾಯಿ, ನಿಮ್ಮ ತಾಯಿಯೂ ಕನ್ನಡ ತಾಯಿ. ನಮ್ಮ ತಾಯ್ನಾಡಿನಲ್ಲಿ ಕನ್ನಡವೇ ಮುಖ್ಯ ಭಾಷೆಯಾಗಬೇಕು. ಅದಕ್ಕೆ ಮರ್ಯಾದೆ ಸಿಗಬೇಕೆಂದು ನಾವು ಒತ್ತಾಯ ಮಾಡುತ್ತಿರುವುದು. ನೀವು ನನ್ನನ್ನು ಹೆದರಿಸುತ್ತಿದ್ದೀರಿ. ಕನ್ನಡದಲ್ಲಿ ನಾನು ಮಾತನಾಡುವುದು ಬೇಡವೆಂದು ನೀವು ಹೇಳುವುದಾದರೆ ಅದು ನಿಮ್ಮ ಹೆದರಿಸುವಂತಹ ನೀತಿಯಾಗುತ್ತದೆ. ನಾನು ಕನ್ನಡದ ಬಗ್ಗೆ ಮಾತನಾಡಿದರೆ ನೀವು ಹೆದರಿಸುತ್ತಿದ್ದೀರಿ.....

ಅಧ್ಯಕ್ಷರು.—ಶ್ರೀ ನಾರಾಯಣಕುಮಾರ್ ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗು ವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಶ್ರೀ ನಾರಾಯಣಕುಮಾರ್, ನೀವು ಒಮ್ಮೊಮ್ಮೆ ಹೀಗೆ ಇದ್ದಕ್ಕಿದ್ದ ಹಾಗೆ ಎದ್ದು ನಿಂತು ಮಾತನಾಡುತ್ತೀರಿ. ನೀವು ಹೀಗೆ ಉದ್ವೇಗದಿಂದ ಮಾತನಾಡಿದರೆ ನನಗೇನೂ ಸಿಟ್ಟಿಲ್ಲ. ನಿಮಗೆ ಸಿಟ್ಟು ಇದೆಯೆಂದು ನಾನು ಸಿಟ್ಟುಮಾಡಿಕೊಳ್ಳುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನಾನು ಕ್ಷಮೆ ಕೇಳುತ್ತಿದ್ದೇನೆ. ಕನ್ನಡಕ್ಕೆ ಆಲ್ಲಿ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿ ಎಂದು ನಾವು ಕೇಳುತ್ತಿರುವುದು.

ಅಧ್ಯಕ್ಷರು.—ಇಲ್ಲಿಗೆ ಇದನ್ನು ಸಾಕು ಮಾಡೋಣ. ಮುಂದಿನ ಗವಂನ ಸೆಳೆಯುವ ಸೂಚನೆಯಂನ್ನು ಶ್ರೀ ಶ್ರೀನಿವಾಸ್ ಅವರು ಕೇಳುತ್ತಾರೆ. ಶ್ರೀನಿವಾಸ್‌ರವರೇ ನಿಲವು ಮಾತನಾಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ,.....

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿಲ್ಲ. ಕಳೆದ ವರ್ಷ ಜನವರಿ ೨೧ನೇ ತಾರೀಖು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಇದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಂದಿದ್ದರು. ಆಗ ಪಕ್ಷ ಭೇದವಿಲ್ಲದೆ ನಾವೆಲ್ಲರೂ ಬೆಂಬಲವನ್ನು ಕೊಟ್ಟಿದ್ದೆವು. ಆದರೆ ಮಾರನೇ ದಿವಸವೇ ಬೆಳಗಾವಿಯಲ್ಲಿ.....

ಅಧ್ಯಕ್ಷರು.—ತುಂಗಳರವರೇ, ಸಾಕುಮಾಡಿ. ನೀವು ಸಾಕಷ್ಟು ಹೇಳಿದ್ದೀರಿ.

ಶ್ರೀ ಜಿ. ನಾರಾಯಣಕುಮಾರ್.—ವಿಷಯ ಪ್ರಸ್ತಾಪ ಮಾಡಿದಂಥ ಮಾನ್ಯ ಸದಸ್ಯರು ಇನ್ನೂ ಎದ್ದು ನಿಂತಿದ್ದಾರೆ. ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನೇ ಕೊಟ್ಟಿಲ್ಲ. ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಜಿ ನಾರಾಯಣಕುಮಾರ್.—ಶ್ರೀ ತುಂಗಳ್ ಅವರು ನಿಂತೇ ಇರುವಾಗ ನೀವು ಬೇರೆಯವರನ್ನು ಕರೆದಿದ್ದೀರಿ.

ಅಧ್ಯಕ್ಷರು.— ನೀವು ಕೂತ್ಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ನೀವು ಹೀಗೆ ಕೂತ್ಕೊಳ್ಳಿ ಎಂದು ಹೇಳುವುದಾದರೆ ನಾವೇನು ಸ್ಕೂಲ್ ಹುಡುಗರೇ ?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಾನು ಎರಡು ಮಾತನ್ನು ಹೇಳಬೇಕಾಗಿದೆ ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಕೂತ್ಕೊಳ್ಳಿ.—ನಾನು ಈಗ ಶ್ರೀ ಶ್ರೀನಿವಾಸ್ ಅವರನ್ನು ಕರೆದಿದ್ದೇವೆ.

(೯) ಶಿವಮೊಗ್ಗ ತಾಲ್ಲೂಕು, ಚಿಕ್ಕಮರಡಿ ಗ್ರಾಮದ ಇಬ್ಬರು ಕೂಲಿಯಾಳುಗಳು ನಾಪತ್ತೆಯಾಗಿರುವ ಬಗ್ಗೆ.

ಶ್ರೀ ಕೆ. ಹೆಚ್. ಶ್ರೀನಿವಾಸ್(ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ನಾನು ಶಿವಮೊಗ್ಗ ತಾಲ್ಲೂಕು ಚಿಕ್ಕಮರಡಿ ಗ್ರಾಮದ ಹರಿಜನ ಗಿರಿಜನ ಕೋಮಿಗೆ ಸೇರಿದ ಇಬ್ಬರು ಕೂಲಿಯಾಳುಗಳು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಪೋಲೀಸರ ವಶದಿಂದ ನಾಪತ್ತೆಯಾಗಿರುವ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ. ಶಿವಮೊಗ್ಗ ತಾಲ್ಲೂಕಿನ ಚಿಕ್ಕಮಾರಡಿ ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಇಬ್ಬರು ಕೂಲಿಯವರು ಧಾರವಾಡ ಜಿಲ್ಲಾ ರೋಣ ತಾಲ್ಲೂಕಿನ ಪೋಲೀಸರ ಅಭಿರಕ್ಷೆಯಿಂದ ನಾಪತ್ತೆಯಾಗಿದ್ದಾರೆ ಎಂಬುದರ ಬಗ್ಗೆ ಗದಗ್ ವಿಭಾಗದ ಆರಕ್ಷಕ ಉಪ ಅಧೀಕ್ಷಕರವರ ವಾಲಿಕ ತನಿಖೆ ಮಾಡಿಸಲಾಯಿತು. ತನಿಖೆಯ ಪ್ರಕಾರ ಚಿಕ್ಕಮಾರಡಿ ಗ್ರಾಮದ ಯಾರನ್ನೂ ಕೂಡ ರೋಣ ಪೋಲೀಸ್ ಠಾಣೆಗೆ ತಂದಿಲ್ಲವೆಂದು ಮತ್ತು ಕೂಡಿ ಹಾಕಿಲ್ಲವೆಂದು ಕಂಡು ಬಂದಿದೆ. ಇತರ ಪೋಲೀಸ್ ಠಾಣೆಗಳಲ್ಲಿ ಈ ಬಗ್ಗೆ ವಿಚಾರಿಸಲಾಗಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನೆಲ್ಲೂರಿನ ದನಚಿನ ಮಂಗ ಮಂಜುನಾಥ ಮತ್ತು ಗೋಪನಾಲ್ ಗ್ರಾಮದ ಚಮಲ್ಲನ ಮಂಗ ಬೋರ್ಲಿ ಎಂಬುವರು ಮುಳಗುಂದ್‌ನಲ್ಲಿ ದಿನಾಂಕ ೬-೨-೮೬ರಂದು ರಾತ್ರಿ ಸುಮಾರು ೩-೩೧ ಗಂಟೆ ಸಮಯದಲ್ಲಿ ಸಂಶಯಾಸ್ಪದ ರೀತಿಯಲ್ಲಿ ಓಡಾಡುವುದನ್ನು ಕಂಡು ಅವರನ್ನು ಮುಳಗುಂದ್ ಪೋಲೀಸರು ದಸ್ತಗಿರಿ ಮಾಡಿ ಗದಗ್ ತಾಲ್ಲೂಕಿನ ದಂಡಾಧಿಕಾರಿಯವರ ಮುಂದೆ ಹಾಜರ್‌ಪಡಿಸಿದರು. ತಾಲ್ಲೂಕಿನ ದಂಡಾಧಿಕಾರಿಯವರು ಆರೋಪಿಗಳನ್ನು ದಿನಾಂಕ ೧೭-೨-೮೬ರವರೆಗೆ ನ್ಯಾಯಾಂಗ ಅಭಿರಕ್ಷೆಗೆ ಒಳಪಡಿಸಿದರು ಆವರಿಗೆ ಯಾರೂ ಜಾಮೀನು ಕೊಡಲು ಬರದೆ